# ಮುತ್ತುಪ್ಪಾಡಿಯ ಮಾಟಗಾತಿ

ಕಣೆ ಹೇಳುವ ಆ ಮಾಟಗಾತಿಯ ಮನೆಯಿದ್ದದ್ದು ಗುಡ್ಡೆಶಾಲೆಯ ಉತ್ತರಕ್ಕಿದ್ದ ಇಳಿಜಾರಿನಲ್ಲಿ. ಈಗ ಆ ಮನೆಯೂ ಇಲ್ಲ; ಮಾಟಗಾತಿಯೂ ಇಲ್ಲ. ಅವಳು ಬದುಕಿದ್ದ ಕಾಲದಲ್ಲಿ ನಾವ್ಯಾರೂ ಹುಡುಗರು ಅವಳನ್ನು ಕಂಡದ್ದಿಲ್ಲ. ಈ ಘಟನೆ ನಡೆದದ್ದು ನಾವು ಚೆಣ್ಣೆದಾಂಡು ಆಡುತ್ತಿದ್ದ ಕಾಲದಲ್ಲಿ. ಮರೆತೇ ಹೋಗಿದ್ದ ಘಟನೆ ಇದ್ದಕ್ಕಿದ್ದಂತೆ ನೆನಪಾದದ್ದು, ಹೆಂಡತಿ ಕೇಳಿದ ಒಂದು ಸಣ್ಣ ಪ್ರಶ್ನೆಯಿಂದ.

